# 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ.

**ಸತ್ರ ಪ್ರಕರಣ ಸಂಖ್ಯೆ.101/2023**

ಪಿರ್ಯಾದುದಾರರು : ಕೆ.ಎಂ. ದೊಡ್ಡಿ ಪೊಲೀಸ್ ಠಾಣೆ.

- ವಿರುದ್ಧ -

ಆರೋಪಿತರು : ದೊಡ್ಡಯ್ಯ ಮತ್ತು ಇತರರು.

**: ದೋಷಾರೋಪಣೆ :**

ನಾನು ಶ್ರೀಮತಿ ಸಯೀದುನ್ನೀಸ, ಎಂ.ಎ., ಎಲ್ಎಲ್.ಬಿ., 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ :

ನೀವು ಆರೋಪಿ : 1. ಶ್ರೀ ದೊಡ್ಡಯ್ಯ, 30 ವರ್ಷ,
ಬಿನ್ ನಾಗ,
ವಾಸ : ದೊಡ್ಡರಸಿನಕೆರೆ ಗ್ರಾಮ,
ಸಿ.ಎ. ಕೆರೆ ಹೋಬಳಿ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

2. ಶ್ರೀ ದೇವರಾಜು, 28 ವರ್ಷ,
ಬಿನ್ ರಾಜಣ್ಣ,
ವಾಸ : ಚಿಕ್ಕಮರೀಗೌಡನದೊಡ್ಡಿ ಗ್ರಾಮ,
ಸಿ.ಎ. ಕೆರೆ ಹೋಬಳಿ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

3. ಶ್ರೀ ಅಭಿಷೇಕ ಡಿ.ವೈ., 29 ವರ್ಷ,
ಬಿನ್ ಲೇಟ್ ಯಾಲಕ್ಕಯ್ಯ,
ವಾಸ : ದೊಡ್ಡರಸಿನಕೆರೆ ಗ್ರಾಮ,
ಸಿ.ಎ. ಕೆರೆ ಹೋಬಳಿ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

4. ಶ್ರೀ ಪುಟ್ಟಸ್ವಾಮಿ, 24 ವರ್ಷ,
ಬಿನ್ ಮಹದೇವು ಉಃ ಗಾಳಿ ಮಹದೇವ,
ವಾಸ : ಸೈಟ್ ನಂ.5, ಮಲ್ಲೇನಹಳ್ಳಿ ಗ್ರಾಮ,
ಸಿ.ಎ. ಕೆರೆ ಹೋಬಳಿ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

5. ಶ್ರೀ ಹೃತಿಕ್ ಕುಮಾರ, 23 ವರ್ಷ,
ಬಿನ್ ಲೇಟ್ ವೆಂಕಟೇಶ,
ವಾಸ : ಅಣ್ಣೂರು ಗ್ರಾಮ,
ಸಿ.ಎ. ಕೆರೆ ಹೋಬಳಿ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

6. ಶ್ರೀ ರಾಘವೇಂದ್ರ ಡಿ.ಎನ್., 29 ವರ್ಷ,
ಬಿನ್ ನಾಗ,
ವಾಸ : ದೊಡ್ಡರಸಿನಕೆರೆ ಗ್ರಾಮ,
ಸಿ.ಎ. ಕೆರೆ ಹೋಬಳಿ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

7. ಶ್ರೀ ಅರವಿಂದ ಕೆ.ಎಸ್., 24 ವರ್ಷ,
ಬಿನ್ ಕುಳ್ಳಯ್ಯ,
ವಾಸ : ಚಿಕ್ಕಮರೀಗೌಡನದೊಡ್ಡಿ ಗ್ರಾಮ,
ಸಿ.ಎ. ಕೆರೆ ಹೋಬಳಿ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

ಕೆ.ಎಂ.ದೊಡ್ಡಿ ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡರಸಿನಕೆರೆ ಗ್ರಾಮದ ಮೃತ ಅರುಣಗೌಡ ಉಃ ಕಪ್ಪೆಯು ಮದ್ಯಪಾನ ಮಾಡಿ 1ನೇ ಆರೋಪಿಯಾದ ನಿಮಗೆ ರೂ.1,00,000/- ಹಣವನ್ನು ಕೊಡುವಂತೆ ಹೇಳಿ ಬಾಯಿಗೆ ಬಂದಂತೆ ಬೈದಿದ್ದ ವಿಚಾರವಾಗಿ 1ನೇ ಆರೋಪಿಯಾದ ನೀವು ದ್ವೇಷ ಇಟ್ಟುಕೊಂಡು ದಿನಾಂಕಃ20.11.2022 ರಂದು ಕಪ್ಪೆ ಉಃ ಅರುಣಗೌಡನನ್ನು ಕೊಲೆ ಮಾಡುವ ಉದ್ದೇಶದಿಂದ 1 ರಿಂದ 3ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ದೊಡ್ಡರಸಿನಕೆರೆ ಗ್ರಾಮದ ನಾರಾಯಣ ಬಿನ್ ತಮ್ಮಣ್ಣರವರ ಮನೆಯ ಮುಂದಿನ ಜಗುಲಿಯ ಬಳಿ ಸೇರಿ ಕುಳಿತುಕೊಂಡು ಒಳಸಂಚು ರೂಪಿಸಿ ಕ್ರಿಮಿನಲ್ ಪಿತೂರಿ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತ ದಂಡ ಸಂಹಿತೆ ಕಲಂ.120(ಬಿ) ಸಹವಾಚಕ ಕಲಂ.149 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

2. ಅದರಂತೆ ದಿನಾಂಕಃ20.11.2022 ರಂದು ಸಂಜೆ 4.00 ಗಂಟೆಯ ಸಮಯದಲ್ಲಿ 1ನೇ ಆರೋಪಿಯಾದ ನೀವು ಹಣದ ವಿಚಾರವಾಗಿ ದ್ವೇಷ ಇಟ್ಟುಕೊಂಡು ಕಪ್ಪೆ ಉಃ ಅರುಣಗೌಡನನ್ನು ಕೊಲೆ ಮಾಡುವ ಏಕೋದ್ದೇಶದಿಂದ ಇತರ ಆರೋಪಿತರೊಂದಿಗೆ

ಅಕ್ರಮವಾಗಿ ಗುಂಪು ಕಟ್ಟಿಕೊಂಡು ದೊಡ್ಡರಸಿನಕೆರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಂದಿನ ಆವರಣಕ್ಕೆ ಹೋಗಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತ ದಂಡ ಸಂಹಿತೆ ಕಲಂ.143 ಸಹವಾಚಕ ಕಲಂ.149 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

3. ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1ನೇ ಆರೋಪಿಯಾದ ನೀವು ಹಣದ ವಿಚಾರವಾಗಿ ದ್ವೇಷ ಇಟ್ಟುಕೊಂಡು ಕಪ್ಪೆ ಉಃ ಅರುಣಗೌಡನನ್ನು ಕೊಲೆ ಮಾಡುವ ಏಕೋದ್ದೇಶದಿಂದ ಇತರ ಆರೋಪಿತರೊಂದಿಗೆ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಕೈಗಳಲ್ಲಿ ಮಾರಕಾಸ್ತ್ರಗಳಾದ ಕಾಂಕ್ರೀಟ್ ಕಲ್ಲು, ದೊಣ್ಣೆ ಹಾಗೂ ಗೊದಮಟ್ಟೆಗಳನ್ನು ಹಿಡಿದುಕೊಂಡು ದೊಡ್ಡರಸಿನಕೆರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಂದಿನ ಆವರಣಕ್ಕೆ ಹೋಗಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತ ದಂಡ ಸಂಹಿತೆ ಕಲಂ.147 ಸಹವಾಚಕ ಕಲಂ.149 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

4. ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1ನೇ ಆರೋಪಿಯಾದ ನೀವು ಹಣದ ವಿಚಾರವಾಗಿ ದ್ವೇಷ ಇಟ್ಟುಕೊಂಡು ಕಪ್ಪೆ ಉಃ ಅರುಣಗೌಡನನ್ನು ಕೊಲೆ ಮಾಡುವ ಏಕೋದ್ದೇಶದಿಂದ ಇತರ ಆರೋಪಿತರೊಂದಿಗೆ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಚಾಸಾ-1 ಅಭಿಷೇಕ್ ಮತ್ತು ಚಾಸಾ-3 ಅಮಿತ್ ರವರ ಜೊತೆಯಲ್ಲಿ ಬೈಕಲ್ಲಿ ಬಂದ ಅರುಣಗೌಡ ಉಃ ಕಪ್ಪೆಯನ್ನು ಏಕಾಏಕಿ ಕತ್ತಿನಪಟ್ಟಿ ಹಿಡಿದು ತನ್ನ ಕೈಮುಷ್ಟಿ ಮಾಡಿ ಆತನ ಮೈಮೇಲೆ ಗುದ್ದಿದ್ದು, 4ನೇ ಆರೋಪಿಯಾದ ನೀವು ಕಾಲಿನಿಂದ ಆತನನ್ನು ಒದ್ದಾಗ ಆತ ಗಿಡಗಳ ಮಧ್ಯೆ ಇಳಿಜಾರಿನಲ್ಲಿ ಬಿದ್ದಿದ್ದು, ಆರೋಪಿತರಾದ ನೀವು ಚಾಸಾ-9 ಪುಟ್ಟರಾಜುರವರ ಬಾಬ್ತು ದೇವರಹಳ್ಳಿ ಗ್ರಾಮದ ಸರ್ವೆ ನಂಬರ್ 1105/2ಎ1 ರ ತೇವದ ಹುಲ್ಲಿನ ಗದ್ದೆಗೆ ಆತನನ್ನು ಎಳೆದುಕೊಂಡು ಹೋಗಿ ಕೈಯಿಂದ ಹೊಡೆದು, ಕಾಲಿನಿಂದ ತುಳಿದು, ಕಾಂಕ್ರೀಟ್ ಕಲ್ಲನ್ನು ಎತ್ತಿಕೊಂಡು ಅರುಣಗೌಡ ಉಃ ಕಪ್ಪೆಯ ಹಣೆಯ ಮೇಲೆ ಗುದ್ದಿ, 6ನೇ ಆರೋಪಿಯಾದ ನೀವು ಗೊದಮಟ್ಟೆಯಿಂದ ಆತನ ತಲೆಯ ಮೇಲೆ ಹೊಡೆದು, 1ನೇ ಆರೋಪಿಯಾದ ನೀವು ದೊಣ್ಣೆಯಿಂದ ಆತನ ತಲೆ

ಮತ್ತು ಬೆನ್ನಿನ ಹಿಂಭಾಗಕ್ಕೆ ಹೊಡೆದಾಗ ಆತ ಗದ್ದೆಯಲ್ಲಿ ಮೊಕಾಡೆಯಾಗಿ ಬಿದ್ದು ಹೋಗಿದ್ದು, 2ನೇ ಆರೋಪಿಯಾದ ನೀವು ದೊಣ್ಣೆಯಿಂದ ಅರುಣಗೌಡ ಉ: ಕಪ್ಪೆಯ ತಲೆಯ ಹಿಂಭಾಗಕ್ಕೆ ಬಲವಾಗಿ ಎರಡು ಬಾರಿ ಮಾರಣಾಂತಿಕವಾಗಿ ಹಲ್ಲೆ ಮಾಡಿರುತ್ತೀರಿ.

ನಂತರ ಆತನ ತಲೆಗೆ ತೀವ್ರವಾಗಿ ಪೆಟ್ಟಾಗಿ ಪ್ರಜ್ಞೆ ತಪ್ಪಿದ್ದರಿಂದ ಆತನನ್ನು ಚಾಸಾ-01 ಮತ್ತು 02 ರವರು ಕೆ.ಎಂ.ದೊಡ್ಡಿಯ ಜಿ.ಮಾದೇಗೌಡ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿದ್ದು, ಅಲ್ಲಿಂದ ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಬಿ.ಜಿ.ಎಸ್. ಆಸ್ಪತ್ರೆಗೆ ಒಳರೋಗಿಯಾಗಿ ದಾಖಲು ಮಾಡಿದ್ದಾಗ ಅಲ್ಲಿ ಅರುಣಗೌಡ ಉ: ಕಪ್ಪೆ ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ:20.11.2022 ರಂದು ರಾತ್ರಿ 10.35 ಗಂಟೆಯಲ್ಲಿ ಮೃತಪಟ್ಟಿರುತ್ತಾರೆ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತ ದಂಡ ಸಂಹಿತೆ ಕಲಂ.302 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

5. ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1ನೇ ಆರೋಪಿಯಾದ ನೀವು ಹಣದ ವಿಚಾರವಾಗಿ ದ್ವೇಷ ಇಟ್ಟುಕೊಂಡು ಅರುಣಗೌಡ ಉ: ಕಪ್ಪೆರವರಿಗೆ ಅವಮಾನ ಮಾಡುವ ಉದ್ದೇಶದಿಂದ ಆತನನ್ನು ಉದ್ದೇಶಿಸಿ ಬೋಳಿಮಗನೆ, ಸೂಳೆಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.149 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

6. ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1ನೇ ಆರೋಪಿಯಾದ ನೀವು ಹಣದ ವಿಚಾರವಾಗಿ ದ್ವೇಷ ಇಟ್ಟುಕೊಂಡು ಇತರ ಆರೋಪಿತರೊಂದಿಗೆ ಸೇರಿಕೊಂಡು ಅರುಣಗೌಡ ಉ: ಕಪ್ಪೆರವರಿಗೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದು, ಚಿಕಿತ್ಸೆ ಸಂಬಂಧ ಚಾಸಾ-1 ಮತ್ತು 02 ರವರು ಅರುಣಗೌಡ ಉ: ಕಪ್ಪೆರವರನ್ನು ಬೈಕಿನಲ್ಲಿ ಕೂರಿಸಿಕೊಂಡು ಕೆ.ಎಂ.ದೊಡ್ಡಿ ಆಸ್ಪತ್ರೆಗೆ ದೇವರಹಳ್ಳಿ ಮಾರ್ಗವಾಗಿ ಕರೆದುಕೊಂಡು ಹೋಗುತಿದ್ದಾಗ, 3 ರಿಂದ 5ನೇ ಆರೋಪಿತರಾದ ನೀವು ಕೆಎ-42-ಎಇ-1403 ರ ಸ್ಕೂಟರ್ ನಲ್ಲಿ ಅವರನ್ನು ಓವರ್ ಟೇಕ್ ಮಾಡಿಕೊಂಡು ಬಂದು

ಚಾಸಾ-7 ನಂಜಮ್ಮ ಕೋಂ ದಾಸೇಗೌಡರವರ ಮನೆಯ ಮುಂದಿನ ದೇವರಹಳ್ಳಿ-ಕೆ.ಎಂ.ದೊಡ್ಡಿ ರಸ್ತೆಯಲ್ಲಿ ಗಾಯಾಳುವನ್ನು ಅಡ್ಡಹಾಕಿ ಅಕ್ರಮವಾಗಿ ತಡೆದು ನಿಲ್ಲಿಸಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತ ದಂಡ ಸಂಹಿತೆ ಕಲಂ.341 ಸಹವಾಚಕ ಕಲಂ.149 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

7. ಈ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 3, 4, 6 ಮತ್ತು 7 ನೇ ಆರೋಪಿತರಾದ ನೀವು ಹಾಗೂ 8 ನೇ ಆರೋಪಿ ಏಕೋದ್ದೇಶದಿಂದ ಅರುಣಗೌಡ ಉಃ ಕಪ್ಪೆರವರನ್ನು ಉದ್ದೇಶಿಸಿ ಈತನನ್ನು ಉಳಿಸಬೇಡ, ಸಾಯಿಸಿಬಿಡು ಎಂದು ಇತರ ಆರೋಪಿತರಿಗೆ ಕುಮ್ಮಕ್ಕು ನೀಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾರತ ದಂಡ ಸಂಹಿತೆ ಕಲಂ.109 ರನ್ವಯ ಅಪರಾಧವೆಸಗಿರುತ್ತೀರಾ ಎಂದು ನಿಮ್ಮ ಮೇಲೆ ಆಪಾದಿಸಿದ್ದೇನೆ.

ಈ ಮೇಲೆ ಹೇಳಿರುವ ದೋಷಾರೋಪಣೆ ಬಗ್ಗೆ ನಿಮ್ಮ ವಿಚಾರಣೆ ಈ ನ್ಯಾಯಾಲಯದಲ್ಲಿ ನಡೆಯತಕ್ಕದ್ದು ಎಂದು ಆದೇಶಿಸಲಾಗಿದೆ.

ದಿನಾಂಕಃ 02.07.2024.

(ಸಯೀದುನ್ನೀಸ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.